Fax: 08282-256262
E-mail:kuvempuacademic@gmail.com

Phone No - 08282-256149
Website:www.kuvempu.ac.in

# ಕುವೆಂಪು ವಿಶ್ವವಿದ್ಯಾಲಯ

ಶೈಕ್ಷಣಿಕ ವಿಭಾಗ, ವಿಶ್ವವಿದ್ಯಾಲಯ ಕಾರ್ಯಾಲಯ, ಕುವೆಂಪು ಶತಮಾನೋತ್ಸವ ಭವನ, ಜ್ಞಾನ ಸಹ್ಯಾದ್ರಿ,
ಶಂಕರಘಟ್ಟ – 577 451, ಶಿವಮೊಗ್ಗ ಜಿಲ್ಲೆ.

ಸಂಖ್ಯೆ:ಕುವಿ:ಶೈವಿ:ಎಸಿ–6: ~~2404~~ 2409 2025–26

ದಿನಾಂಕ:24–09–2025

## ಸುತ್ತೋಲೆ

ವಿಷಯ:– ಕರ್ನಾಟಕ ಸರ್ಕಾರದ "ದೀಪಿಕಾ" ಯೋಜನೆಯಡಿಯಲ್ಲಿ ಅಜೀಂ ಪ್ರೇಮ್‌ಜೀ ವಿದ್ಯಾರ್ಥಿವೇತನ ಮತ್ತು ಪೂರಕ ವಿದ್ಯಾರ್ಥಿವೇತನಕ್ಕಾಗಿ ಅರ್ಜಿ ಆಹ್ವಾನಿಸಿರುವ ಬಗ್ಗೆ.

ಉಲ್ಲೇಖ:– ಸಂಖ್ಯೆ:ಕಾಶಿಇ:29:Azim Prem Sch:2025-26:ವಿ.ವೇ ಬೆಂಗಳೂರು, ದಿನಾಂಕ:22–09–2025

* * * * *

ಉಲ್ಲೇಖಿತ ಕಾಲೇಜು ಶಿಕ್ಷಣ ಇಲಾಖೆ ಪತ್ರದಲ್ಲಿ ವಿದ್ಯಾರ್ಥಿನಿಯರು ಉನ್ನತ ಶಿಕ್ಷಣವನ್ನು ಪಡೆಯಲು ಎದುರುಸುತ್ತಿರುವ ಆರ್ಥಿಕ ಸಮಸ್ಯೆಗಳನ್ನು ಕಡಿಮೆ ಮಾಡಲು ವಿದ್ಯಾರ್ಥಿ

ವೇತನ ನೀಡುವ ಮೂಲಕ ಹೆಣ್ಣು ಮಕ್ಕಳನ್ನು ಆರ್ಥಿಕ ಸಬಲೀಕರಣಗೊಳಿಸಿ, ಅಸಮಾನತೆಯನ್ನು ತಗ್ಗಿಸಿ, ಸಮಾಜಿಕ ಮತ್ತು ಆರ್ಥಿಕ ನ್ಯಾಯ ಒದಗಿಸುವ ಉದ್ದೇಶದಿಂದ ಕರ್ನಾಟಕ ಸರ್ಕಾರ 2025–26ನೇ ಸಾಲಿನಿಂದ ಉನ್ನತ ಶಿಕ್ಷಣ ಇಲಾಖೆ ಮತ್ತು ಅಜೀಂ ಪ್ರೇಂಜಿ ಫೌಂಡೇಷನ್ ಸಹಯೋಗದಲ್ಲಿ **"ದೀಪಿಕಾ" ಯೋಜನೆಯಡಿಯಲ್ಲಿ "ಅಜೀಂ ಪ್ರೇಮ್‌ಜೀ ವಿದ್ಯಾರ್ಥಿವೇತನ ಮತ್ತು ಪೂರಕ ವಿದ್ಯಾರ್ಥಿವೇತನ"** ವನ್ನು ಅನುಷ್ಠಾನಗೊಳಿಸಿರುತ್ತದೆ.

2025–26ನೇ ಶೈಕ್ಷಣಿಕ ಸಾಲಿಗೆ ಪ್ರಥಮ ಪದವಿ / ಡಿಪ್ಲೊಮಾ ತರಗತಿಗೆ ದಾಖಲಾಗಿ ವಿದ್ಯಾಭ್ಯಾಸ ಮಾಡುತ್ತಿರುವ ಎಲ್ಲಾ ವರ್ಗದ ವಿದ್ಯಾರ್ಥಿನಿಯರು ಸದರಿ ವಿದ್ಯಾರ್ಥಿವೇತನಕ್ಕಾಗಿ ಅರ್ಜಿ ಸಲ್ಲಿಸಬಹುದಾಗಿರುತ್ತದೆ. ವಾರ್ಷಿಕ ರೂ.30,000/–ಗಳ ವಿದ್ಯಾರ್ಥಿವೇತನ ಮಂಜೂರಾತಿ ಇದ್ದು, ಅರ್ಜಿಗಳನ್ನು ದಿನಾಂಕ:30–09–2025ರೊಳಗೆ ಈ ಮುಂದಿನ ಲಿಂಕ್ https://azimpremjifoudation.org/ ಮೂಲಕ ಅರ್ಜಿಸಲ್ಲಿಸಲು ಕೋರಲಾಗಿದೆ.

ಸದರಿ ಯೋಜನೆಗೆ ಸಂಬಂಧಿಸಿದಂತೆ ಅರ್ಹತೆಗಳು ಮತ್ತು ಮಾರ್ಗಸೂಚಿಗಳನ್ನು ಅನುಬಂಧದಲ್ಲಿ ವಿವರಿಸಲಾಗಿದೆ. ಸದರಿ ಅನುಬಂಧವನ್ನು ಈ ಪತ್ರದೊಂದಿಗೆ ಲಗತ್ತಿಸಿ ವಿಶ್ವವಿದ್ಯಾಲಯದ ವೆಬ್‌ಸೈಟ್ ನಲ್ಲಿ ಪ್ರಕಟಿಸಲಾಗಿದೆ.

ಕುಲಸಚಿವರಿಂದ ಅನುಮೋದಿಸಲ್ಪಟ್ಟಿದೆ

ಉಪಕುಲಸಚಿವರು 24/9/2025
ಉಪ ಕುಲಸಚಿವ
ಶೈಕ್ಷಣಿಕ ವಿಭಾಗ,
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನ ಸಹ್ಯಾದ್ರಿ, ಶಂಕರಘಟ್ಟ-577451
ಶಿವಮೊಗ್ಗ ಜಿಲ್ಲೆ.

ಗೆ,

1. ಕುವೆಂಪು ವಿಶ್ವವಿದ್ಯಾಲಯದ ವ್ಯಾಪ್ತಿಗೊಳಪಡುವ ಶಿವಮೊಗ್ಗ / ಚಿಕ್ಕಮಗಳೂರು ಜಿಲ್ಲೆಯ ಎಲ್ಲಾ ಸ್ನಾತಕ ಪದವಿಗಳ ಸಂಯೋಜಿತ/ ಘಟಕ/ ನೇರ ಆಡಳಿತ / ಸ್ವಾಯತ್ತ ಕಾಲೇಜುಗಳ ಪ್ರಾಂಶುಪಾಲರುಗಳಿಗೆ-ಮುಂದಿನ ಅಗತ್ಯ ಸೂಕ್ತಕ್ರಮಕ್ಕಾಗಿ.
2. ಸಂಯೋಜನಾಧಿಕಾರಿಗಳು, ಯು.ಸಿ.ಸಿ.ಎಫ್. ಕಂಪ್ಯೂಟರ್ ಕೇಂದ್ರ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ. ಅಂತರ್ಜಾಲದಲ್ಲಿ ಪ್ರಕಟಿಸಲು ಈ ಮೂಲಕ ತಿಳಿಸಲಾಗಿದೆ.

ಪ್ರತಿಗಳು:

1. ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ, ಕಾಲೇಜು ಶಿಕ್ಷಾನ ಆಯುಕ್ತರ ಕಛೇರಿ, ಬೆಂಗಳೂರು
2. ಕಛೇರಿ ಪ್ರತಿ.

ಅನುಬಂಧ

**ಅರ್ಜಿ ಸಲ್ಲಿಸಲು ವಿದ್ಯಾರ್ಥಿನಿಯರು ಈ ಕೆಳಗಿನ ಅರ್ಹತೆಗಳನ್ನು ಹೊಂದಿರಬೇಕು:-**

1. 10 ಮತ್ತು 12ನೇ ತರಗತಿಗಳನ್ನು (State/ICSE/ISE/CBSE) ಕಡ್ಡಾಯವಾಗಿ ಸರ್ಕಾರಿ ಶಾಲೆ ಮತ್ತು ಸರ್ಕಾರಿ ಕಾಲೇಜಿನಲ್ಲಿ ಅಭ್ಯಾಸ ಮಾಡಿರಬೇಕು.
2. 2025-26ನೇ ಶೈಕ್ಷಣಿಕ ಸಾಲಿನಲ್ಲಿ ಸಂಬಂಧಿಸಿದ ಇಲಾಖಾ ವ್ಯಾಪ್ತಿಯ ಸರ್ಕಾರಿ, ಖಾಸಗಿ ಅನುದಾನಿತ ಮತ್ತು ಖಾಸಗಿ ಪದವಿ/ಡಿಪ್ಲೊಮಾ ಕಾಲೇಜುಗಳಲ್ಲಿ ರೆಗ್ಯುಲರ್ ಪದವಿ ಕೋರ್ಸ್ ಗಳಿಗೆ ಪ್ರವೇಶ ಪಡೆದಿರಬೇಕು.
3. ಈಗಾಗಲೇ ಪದವಿ/ಡಿಪ್ಲೊಮಾ ಕೋರ್ಸುಗಳನ್ನು ಪೂರ್ಣಗೊಳಿಸಿ 2025-26ನೇ ಸಾಲಿನಲ್ಲಿ ಎರಡನೇ/ಹೆಚ್ಚಿನ ಪದವಿ/ಡಿಪ್ಲೊಮಾ ಕೋರ್ಸುಗಳಿಗೆ ಪ್ರವೇಶಾತಿ ಪಡೆದಿರುವ ವಿದ್ಯಾರ್ಥಿನಿಯರು ಅರ್ಹರಿರುವುದಿಲ್ಲ.

**<u>ವಿದ್ಯಾರ್ಥಿನಿಯರು ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ಈ ಕೆಳಕಂಡ ಮಾರ್ಗ ಸೂಚಿಗಳನ್ನು ಅನುಸರಿಸುವುದು.</u>**

**<u>ಭಾಗ-1</u>**

**ವಿದ್ಯಾರ್ಥಿನಿಯರ ನೊಂದಣಿ**

1. ಮೊಬೈಲ್ ಸಂಖ್ಯೆ (OTP ಆಧಾರಿತ ಪರಿಶೀಲನೆ)
2. ಮೊಬೈಲ್ ಸಂಖ್ಯೆ (OTP ಆಧಾರಿತ ಪರಿಶೀಲನೆ)
3. ಪೂರ್ಣ ಹೆಸರು (10ನೇ ತರಗತಿಯ ಅಂಕಪಟ್ಟಿಯಲ್ಲಿ ಇರುವಂತೆ)
4. 10 ನೇ ತರಗತಿಯನ್ನು ಪೂರ್ಣಗೊಳಿಸಿದ ಜಿಲ್ಲೆ ಮತ್ತು ರಾಜ್ಯದ ಹೆಸರು( ಅಂಕ ಪಟ್ಟಿಯಲ್ಲಿರುವಂತೆ)
5. ಆಧಾರ್ ಸಂಖ್ಯೆ ನಮೂದಿಸುವುದು ಮತ್ತು ದೃಢೀಕರಿಸುವುದು
6. ಪಾಸ್ ವರ್ಡ್ ಸೃಜನೆ ಮತ್ತು ದೃಢೀಕರಿಸುವುದು
7. ನೊಂದಣಿಯನ್ನು ಪೂರ್ಣಗೊಳಿಸಿದ ನಂತರ ಅರ್ಜಿದಾರರು ತಮ್ಮ User ID ಯನ್ನು ಅವರ ಮೊಬೈಲ್ ನಲ್ಲಿ ಸ್ವೀಕರಿಸುತ್ತಾರೆ.
8. ನಂತರ ಅರ್ಜಿ ಸಲ್ಲಿಸಲು User ID and Password ನೊಂದಿಗೆ ಲಾಗಿನ್ ಮಾಡುವುದು.

**<u>ಭಾಗ-2</u>**

**ಅರ್ಜಿ ಸಲ್ಲಿಕೆಗೆ (ಅಗತ್ಯವಿರುವ ದಾಖಲೆಗಳು)**

1. ಪಾಸ್ ಪೋರ್ಟ್ ಅಳತೆಯ ಛಾಯಚಿತ್ರ
2. ಸಹಿ
3. ಆಧಾರ್ ಕಾರ್ಡ್
4. ಬ್ಯಾಂಕ್ ವಿವರಗಳು
5. 10 ನೇ ತರಗತಿಯ ಅಂಕಪಟ್ಟಿ
6. 12 ನೇ ತರಗತಿಯ ಅಂಕಪಟ್ಟಿ
7. ಕಾಲೇಜು ಪ್ರವೇಶ ಪುರಾವೆ

- ಸದರಿ ಯೋಜನೆಗೆ ಸಂಬಂಧಿಸಿದಂತೆ, ಉನ್ನತ ಶಿಕ್ಷಣ ಇಲಾಖೆಯು ಸಲ್ಲಿಸುವ ವಿಡಿಯೋಗಳು, ಕರಪತ್ರಗಳು ಹಾಗೂ ಇತರೆ ಸಾಮಗ್ರಿಗಳನ್ನು ಬಳಸಿ ವಿಶ್ವವಿದ್ಯಾಲಯ/ಕಾಲೇಜುಗಳ ಹಂತದಲ್ಲಿ ಪ್ರಚಾರ ಕೈಗೊಳ್ಳಲು ಹಾಗೂ ಈಗಾಗಲೇ ಕಾಲೇಜುಗಳ ಹಂತದಲ್ಲಿ ವಿದ್ಯಾರ್ಥಿವೇತನಕ್ಕೆ ನೇಮಕಗೊಂಡಿರುವ ಸಮನ್ವಯಾಧಿಕಾರಿಯನ್ನೇ ಸದರಿ ಯೋಜನೆಗೂ ನೇಮಿಸುವುದು.
- ವಿಶ್ವವಿದ್ಯಾಲಯ/ಕಾಲೇಜು ಹಂತದಲ್ಲಿ ಅರ್ಹ ವಿದ್ಯಾರ್ಥಿನಿಯರು ಅರ್ಜಿಗಳನ್ನು ಸಲ್ಲಿಸಲು KIOSK ಸೌಲಭ್ಯವನ್ನು (Computer, Internet, Scanner, Printer ಮತ್ತು Operator) ಒದಗಿಸುವುದು.

2/9/25



ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು,
ಕರ್ನಾಟಕ ಸರ್ಕಾರ

Azim Premji Foundation

# ಉನ್ನತ ಶಿಕ್ಷಣ ಇಲಾಖೆ
ಮತ್ತು
# ಅಜೀಂ ಪ್ರೇಮ್‌ಜಿ ಫೌಂಡೇಶನ್
ಸಹಯೋಗದೊಂದಿಗೆ
## ಕರ್ನಾಟಕ ರಾಜ್ಯದ ವಿದ್ಯಾರ್ಥಿನಿಯರಿಗಾಗಿ



ಶ್ರೀ ಡಿ.ಕೆ. ಶಿವಕುಮಾರ್
ಮಾನ್ಯ ಉಪ ಮುಖ್ಯಮಂತ್ರಿಗಳು,
ಕರ್ನಾಟಕ ಸರ್ಕಾರ



ಡಾ॥ ಎಂ.ಸಿ. ಸುಧಾಕರ್
ಮಾನ್ಯ ಉನ್ನತ ಶಿಕ್ಷಣ ಸಚಿವರು,
ಕರ್ನಾಟಕ ಸರ್ಕಾರ

# ದೀಪಿಕಾ
## ಉನ್ನತ ಶಿಕ್ಷಣ ವಿದ್ಯಾರ್ಥಿವೇತನ

ವಿದ್ಯಾರ್ಥಿನಿಯರ ಶಿಕ್ಷಣಕ್ಕಾಗಿ ನೆರವು;
ನಾಡಿನೊಳಗೆ ಸಮೃದ್ಧಿಯ ಹರಿವು



ಶ್ರೀ ಅಜೀಂ ಪ್ರೇಮ್‌ಜಿ
ಮಾನ್ಯ ಅಧ್ಯಕ್ಷರು,
ಅಜೀಂ ಪ್ರೇಮ್‌ಜಿ ಫೌಂಡೇಶನ್



## ರೂಪುರೇಷೆಗಳು:

- ಪ್ರತಿ ವರ್ಷ ರೂ.30,000/- ವಿದ್ಯಾರ್ಥಿವೇತನ
- ಉನ್ನತ ಶಿಕ್ಷಣಕ್ಕೆ ಪ್ರೋತ್ಸಾಹ
- ಕೋರ್ಸ್ ಅವಧಿಯುದ್ದಕ್ಕೂ ಲಭ್ಯತೆ
- ವಿದ್ಯಾರ್ಥಿನಿಯರಿಗೆ ಆರ್ಥಿಕ ಬೆಂಬಲ-ಸಾಮಾಜಿಕ ನ್ಯಾಯ
- ವಿದ್ಯಾರ್ಥಿನಿಯರ ಸಬಲೀಕರಣ

## ಅರ್ಹತೆಗಳು:

- ಸರ್ಕಾರಿ ಶಿಕ್ಷಣ ಸಂಸ್ಥೆಗಳಲ್ಲಿ 10 ಮತ್ತು 12ನೇ ತರಗತಿ (State/ICSE/ISC/CBSE) ವ್ಯಾಸಂಗ ಪೂರೈಸಿರಬೇಕು
- 2025-26ನೇ ಸಾಲಿನಲ್ಲಿ ಸರ್ಕಾರಿ/ಖಾಸಗಿ ಅನುದಾನಿತ/ಖಾಸಗಿ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ರೆಗ್ಯುಲರ್ ಸಾಮಾನ್ಯ ಪದವಿ/ ವೃತ್ತಿಪರ ಪದವಿ/ ಇತರ ಪದವಿ/ ಡಿಪ್ಲೊಮಾ ಕೋರ್ಸ್‌ಗಳಿಗೆ ಪ್ರವೇಶಾತಿ ಪಡೆದಿರಬೇಕು

**ಹೆಚ್ಚಿನ ಮಾಹಿತಿಗಾಗಿ**
**ಈ ಲಿಂಕ್‌ಗೆ ಭೇಟಿ ಮಾಡಿ**

ಹೆಚ್ಚಿನ ವಿವರಗಳಿಗಾಗಿ ಮತ್ತು
ಅರ್ಜಿ ಸಲ್ಲಿಸಲು QR ಸ್ಕ್ಯಾನ್ ಮಾಡಿ

**https://azimpremjifoundation.org** | **ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 30 ಸೆಪ್ಟೆಂಬರ್ 2025**



Shri Siddaramaiah

Hon'ble Chief Minister
Government of Karnataka

# Department of Higher Education And Azim Premji Foundation



Shri D.K. Shivakumar

Hon'ble Deputy Chief Minister
Government of Karnataka

## Collaboratively Institute Scholarship

## FOR GIRL STUDENTS OF KARNATAKA STATE



Dr. M.C. Sudhakar

Hon'ble Minister for Higher Education
Government of Karnataka

# Deepika

### Higher Education Scholarship

Lighting the Path for Leaders of Tomorrow



Shri Azim Premji

Hon'ble Chairman,
Azim Premji Foundation



## Features:

- A scholarship amount of Rs.30,000/- every year
- Encouragement to participate in Higher Education
- Scholarship available through course duration
- Financial Assistance & social equity to girl students
- Empowerment of girls

## Eligibility:

- Should have completed your 10th and 12th standar (State/ICSE/ISC/CBSE) in Government Institutions
- Should have taken admission in Government/ Private Aided/Private Education Institutions to pursue regular General Degree/Professional Degre Diploma during the year 2025-26

For Details and To Apply, Please Scan the QR

Click on the Link

https://azimpremjifoundation.org

Last Date to Apply : 30th Sept 2025